**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 337/2022**

ಚಾ.ಸಾ–01, ಪ್ರಾ.ಸಾ–02

| | | |
|---|---|---|
| ಹೆಸರು | : | ನಾಗರಾಜಮೂರ್ತಿ |
| ತಂದೆಯ ಹೆಸರು | : | ಲೇಟ್ ಶಿವಬಸಪ್ಪ |
| ವಯಸ್ಸು | : | 63 |
| ವೃತ್ತಿ | : | ಮನೆ ಕೆಲಸ |
| ವಾಸ | : | ಜಿ.ಹೆಚ್.ಎಫ್. ಕಾಲೋನಿ, ತಿ. ನರಸೀಪುರ ಪಟ್ಟಣ. |

**<u>ದಿನಾಂಕಃ 05.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಪ್ರಾಸಾ–1 ನನ್ನ ಹೆಂಡತಿ. ಚಾಸಾ–3 ನನ್ನ ಅತ್ತಿಗೆ. ಚಾಸಾ–4 ರಿಂದ 6 ರವರ ಪರಿಚಯವಿದೆ. ಆರೋಪಿತ ನನ್ನ ಷಡಕ (ಚಾಸಾ–3 ರವರ ಗಂಡ).

ದಿನಾಂಕ 02.10.2020 ರಂದು ಚಾಸಾ–3 ರವರು ನನ್ನ ಹೆಂಡತಿಗೆ ದೂರವಾಣಿ ಕರೆ ಮಾಡಿ ಅವರ ತಾಯಿಯ ಒಡವೆಗಳನ್ನು ಹಂಚಿಕೊಳ್ಳಲು ಕೇತುಹಳ್ಳಿಗೆ ಕರೆದಿದ್ದರು. ನಂತರ ನಾನು ನನ್ನ ಹೆಂಡತಿಯನ್ನು ಕೇತುಹಳ್ಳಿಗೆ ಕಳುಹಿಸಿ ಕೊಟ್ಟೆ

ಆನಂತರ, ಚಾಸಾ–4 ರವರು ನನ್ನ ಹೆಂಡತಿಯನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅವರು ನನಗೆ ದೂರವಾಣಿ ಕರೆ ಮಾಡಿ ನನ್ನ ಹೆಂಡತಿಯ ತಲೆಗೆ ಪೆಟ್ಟಾಗಿ ರಕ್ತ ಬರುತ್ತಿದೆ ಎಂದು ತಿಳಿಸಿದರು. ನಂತರ ನಾನು ಆ ಆಸ್ಪತ್ರೆಗೆ ಬಂದಿರುತ್ತೇನೆ. ಆ ವೇಳೆಗೆ ನನ್ನ ಹೆಂಡತಿಗೆ ಪ್ರಜ್ಞೆ ಇರಲಿಲ್ಲ.

ಆ ದಿನ ಮಧ್ಯಾಹ್ನ 2.00 ಗಂಟೆಯ ನಂತರ ನನ್ನ ಹೆಂಡತಿಗೆ ಪ್ರಜ್ಞೆ ಬಂದಿದ್ದು, ಆಕೆ ಮತ್ತು ಚಾಸಾ-3 ರವರು ಸೇರಿ ಚಾಸಾ-3 ರವರ ಮನೆಯಲ್ಲಿ ಮಾತನಾಡುತ್ತಿದ್ದಾಗ ಅವರ ಮನೆಯಲ್ಲಿ ಮಂಚದ ಮೇಲೆ ಮಲಗಿದ್ದ ಆರೋಪಿತ ದೊಣ್ಣೆಯಿಂದ ನನ್ನ ಹೆಂಡತಿಯ ತಲೆಗೆ ಆ ದಿನ ಸುಮಾರು ಬೆಳಿಗ್ಗೆ 11.00 ರಿಂದ 11.30 ಗಂಟೆ ಸಮಯದಲ್ಲಿ ಹೊಡೆದಿರುತ್ತಾರೆ ಎಂದು ನನ್ನ ಹೆಂಡತಿ ನನಗೆ ತಿಳಿಸಿದಳು.

ಘಟನೆಯ ದಿನ ಆರೋಪಿತ ಮತ್ತು ಚಾಸಾ-3 ರವರು ನಮ್ಮ ಬಳಿ ಬಂದು ಏನು ಮಾತನಾಡದ ಕಾರಣ ದಿನಾಂಕ 03.10.2020 ರಂದು ತಿ. ನರಸೀಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ದಿನಾಂಕ 04.10.2020 ರಂದು ನಾನು ಪೊಲೀಸರನ್ನು ಕರೆದುಕೊಂಡು ಆರೋಪಿತನ ಮನೆಗೆ ಬೆಳಿಗ್ಗೆ 10.30 ರಿಂದ 11.30 ಗಂಟೆ ಸಮಯದಲ್ಲಿ ಹೋಗಿದ್ದು, ಅಲ್ಲಿ ಪೊಲೀಸರು ಆ ಮನೆಯ ಚೆಕ್ಕುಬಂಧಿ ಮಾಡಿ, ಹಲ್ಲೆ ಮಾಡಲು ಬಳಸಿದ್ದ ದೊಣ್ಣೆಯನ್ನು ಜಪ್ತಿಪಡಿಸಿ, ನನ್ನ ಸಹಿಯನ್ನು ಪಡೆದು ಪಂಚನಾಮವನ್ನು ಜರುಗಿಸಿದ್ದಾರೆ. ಆ ವೇಳೆಗೆ ಚಾಸಾ-5 ಮತ್ತು 6 ರವರು ಇದ್ದರು. ಆ ಪಂಚನಾಮವನ್ನು ಮತ್ತು

ಅದರಲ್ಲಿರುವ ನನ್ನ  ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಅದನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ಎಂ.ಓ.1 ಎಂದು ಗುರುತಿಸಲ್ಪಟ್ಟಿದೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಗಲಾಟೆಯು ಮಧ್ಯಾಹ್ನ 12.15 ಗಂಟೆಯಲ್ಲಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಎಸ್. ವಕೀಲರಿಂದ ಆರೋಪಿತರ ಪರ :**

ನಾನು ದ್ವಿತೀಯ ಪಿ ಯು ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ದೂರನ್ನು ನಾನೇ ಬರೆದಿರುತ್ತೇನೆ.

ನನ್ನ ಹೆಂಡತಿಯ ತಾಯಿಯ ಹೆಸರು ಮಹದೇವಮ್ಮ ಎಂದರೆ ಸರಿ. ಆಕೆಯ ಜೀವನದ ಅಂತ್ಯದಲ್ಲಿ ಆಕೆಯ ಪಾಲನೆ ಮತ್ತು ಪೋಷಣೆಯನ್ನು ಆರೋಪಿತರ ಮನೆಯವರು ಮಾಡಿರುತ್ತಾರೆ ಎಂದರೆ ಸರಿ, ಆಕೆಗೆ ತಿಂಗಳಿಗೆ ರೂ.18,000/- ಪಿಂಚಣಿ ಬರುತ್ತಿತ್ತು ಮತ್ತು ಆಕೆಯ ಬಳಿ ರೂ.3.00 ಲಕ್ಷ ಹಣವಿತ್ತು. ಆ ಹಣವನ್ನು ಮತ್ತು ಪಿಂಚಣಿಯನ್ನು ಪಡೆದುಕೊಂಡು, ಆಕೆಯ ಪಾಲನೆ ಮತ್ತು ಪೋಷಣೆಯನ್ನು ನಾವು ಮಾಡಲು ಪ್ರಯತ್ನಿಸಿದ್ದೆವು. ಆ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿಲ್ಲ.

ನನ್ನ ಹೆಂಡಿತಯ ತಾಯಿಯು ಮರಣ ಹೊಂದಿದಾಗ ಆಕೆಯ ಉತ್ತರಕ್ರಿಯಾಧಿ ಕಾರ್ಯಗಳನ್ನು ಆರೋಪಿತ ಮತ್ತು ಆತನ ಹೆಂಡತಿ ಮಾಡಿದ್ದರು ಎಂದರೆ ಸರಿ. ಅವರು ನಮ್ಮನ್ನು ಕರೆದಿರಲಿಲ್ಲ. ನನ್ನ ಹೆಂಡತಿಯ ತಾಯಿಗೆ ಸೇರಿದ್ದ ಒಡವೆ ಮತ್ತು ಆಸ್ತಿಗಳು ಇದ್ದವು ಎಂದರೆ ಸರಿ. ಅವರಿಗೆ ನನ್ನ ಹೆಂಡತಿ ಮತ್ತು ಆರೋಪಿತನ ಹೆಂಡತಿ ಮಾತ್ರ ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಒಡವೆ ಮತ್ತು ಆಸ್ತಿಗಳನ್ನು ಇಲ್ಲಿಯವರೆಗೂ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ಆ ಹಿನ್ನೆಲೆಯಲ್ಲಿ ನಮ್ಮ ಮತ್ತು ಆರೋಪಿತನ ಕುಟುಂಬದ ನಡುವೆ ವೈಮನಸ್ಸು ಇತ್ತು ಎಂದರೆ ಅವರ ಮತ್ತು ನಮ್ಮ ನಡುವೆ ಮಾತುಕತೆ ಇರಲಿಲ್ಲ.

ಚಾಸಾ–3 ರವರು ನನ್ನ ಹೆಂಡತಿಗೆ ದೂರವಾಣಿ ಕರೆ ಮಾಡಿದಾಗ ನಾನು ನನ್ನ ಮನೆಯಲ್ಲಿ ಇದ್ದೆ. ನಾನು ನನ್ನ ಹೆಂಡತಿಯ ಜೊತೆ ಚಾಸಾ–3 ರವರ ಮನೆಗೆ ಹೋಗಲು ತೊಂದರೆ ಇತ್ತಾ ಎಂದರೆ, ಅವರಿಬ್ಬರಿಗೆ ಸಂಬಂಧಿಸಿದ ವಿಷಯವಾಗಿದ್ದರಿಂದ ನಾನು ಹೋಗಿಲ್ಲ.

ಚಾಸಾ–4 ರವರ ವೈಯಕ್ತಿಕ ಪರಿಚಯ ನನಗೆ ಇಲ್ಲ ಎಂದರೆ ಸರಿ. ಅವರು ನನಗೆ ದೂರವಾಣಿ ಕರೆ ಮಾಡಿದಾಗ ತಿ. ನರಸೀಪುರದ ಮಹದೇಶ್ವರ ಭವನ ಎಂಬ ಹೋಟೆಲ್ ಬಳಿಯಿದ್ದೆ. ಆ ದಾರಿಯಲ್ಲಿ ನಾನು ನನ್ನ ಹೆಂಡತಿಯನ್ನು ಭೇಟಿಯಾಗಿ ಮಾತನಾಡಿರುತ್ತೀರಾ ಎಂದರೆ ಆ ದಾರಿಯಲ್ಲಿ ನಾನು ಆಕೆಯನ್ನು ಭೇಟಿಯಾಗಿಲ್ಲ.

ನನ್ನ ಹೆಂಡತಿಗೆ ಪ್ರಜ್ಞೆ ಬಂದ ನಂತರ ನಾನು ಆಕೆಯ ಜೊತೆ ಪ್ರಜ್ಞೆ ಕುರಿತು ಮಾತನಾಡಿದೆ ಎಂದು ನನ್ನ ದೂರಿನಲ್ಲಿ ಹೇಳಿಲ್ಲ. ತಿ. ನರಸೀಪುರದಲ್ಲಿ ಪೊಲೀಸ್ ಠಾಣೆ ಇದೆ ಎಂದರೆ ಸರಿ. ಘಟನೆಯ ದಿನವೇ ಠಾಣೆಗೆ ಹೋಗಿ ದೂರು ನೀಡಲು ತೊಂದರೆ ಇತ್ತೇ ಎಂದರೆ, ಆರೋಪಿತ ಮತ್ತು ಆತನ ಹೆಂಡತಿ ಆ ದಿನ ಆಸ್ಪತ್ರೆಗೆ ಬಂದು ಮಾತುಕತೆ ಆಡಬಹುದು ಎಂದು ನಾನು ಆ ದಿನ ದೂರು ನೀಡಿಲ್ಲ. ಆ ವಿಷಯವನ್ನು ದೂರಿನಲ್ಲಿ ಹೇಳಿದ್ದೀರಾ ಎಂದರೆ ನೆನಪಿಲ್ಲ.

ನನ್ನ ಹೆಂಡತಿಯ ತಾಯಿಯ ಆಸ್ತಿ ಮತ್ತು ಒಡವೆ ವಿಚಾರದಲ್ಲಿ ನಮ್ಮ ಮತ್ತು ಆರೋಪಿತನ ಕುಟುಂಬದ ನಡುವೆ ಇದ್ದ ವೈಮನಸ್ಸಿನ ಹಿನ್ನೆಲೆಯಲ್ಲಿ ನಾವು ಆರೋಪಿತನ ವಿರುದ್ಧ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸರು ಪಂಚನಾಮಕ್ಕಾಗಿ ಸ್ಥಳಕ್ಕೆ ಬಂದಾಗ ಬೆಳಿಗ್ಗೆ 11.00 ಗಂಟೆಯಾಗಿತ್ತು. ಪಂಚನಾಮದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಎಂಒ.1 ರ ದೊಣ್ಣೆಯನ್ನು ಪಂಚನಾಮದ ವೇಳೆಗೆ ಜಪ್ತಿಪಡಿಸಲಾಯಿತು ಎಂದು ತೋರಿಸಲು ಅದರಲ್ಲಿ ಯಾವುದಾದರೂ ವಿಶೇಷ ಗುರುತು ಇದೆಯೇ ಎಂದರೆ ಅದೇ ದೊಣ್ಣೆಯಾಗಿರುತ್ತದೆ. ಆ ರೀತಿಯ ದೊಣ್ಣೆಯನ್ನು ಹಳ್ಳಿಗಳಲ್ಲಿ ಸೌದೆಗಾಗಿ ಬಳಸುತ್ತಾರೆ ಎಂದರೆ ಸರಿ. ನಾನು ಹೇಳುವಂತೆ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮ ಜರುಗಿಸಿ, ದೊಣ್ಣೆಯನ್ನು ಜಪ್ತಿಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಆಸ್ತಿ ದೊರೆತಿಲ್ಲ ಎಂದು ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ **ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದ. ತಿ.ನರಸೀಪುರ**

**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ 337/2022**

ಚಾ.ಸಾ–03, ಪ್ರಾ.ಸಾ–03

| | | |
|---|---|---|
| ಹೆಸರು | : | ಪ್ರೇಮ |
| ಗಂಡನ ಹೆಸರು | : | ಮಹದೇವಪ್ಪ |
| ವಯಸ್ಸು | : | 51 |
| ವೃತ್ತಿ | : | ವ್ಯವಸಾಯ |
| ವಾಸ | : | ಕೇತಹಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು. |

**<u>ದಿನಾಂಕಃ 05.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಪ್ರಾಸಾ–1 ನನ್ನ ತಂಗಿ. ಪ್ರಾಸಾ–2 ಅವರ ಗಂಡ. ಆರೋಪಿತ ನನ್ನ ಗಂಡ. ಆರೋಪಿತ ನನ್ನ ತಂಗಿಗೆ ಹಲ್ಲೆ ಮಾಡಿಲ್ಲ. ಪ್ರಾಸಾ–2 ರವರು ದೂರು ನೀಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**<u>ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.</u>**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ದಿಃ 03.10.2020 ರಂದು ಮಧ್ಯಾಹ್ನ 12.15 ಗಂಟೆ ಸಮಯದಲ್ಲಿ ತಿ. ನರಸೀಪುರ ತಾಲ್ಲೂಕಿನ ನಮ್ಮ ಗ್ರಾಮದ ನನ್ನ ಮನೆಯಲ್ಲಿ ನಾನು ಮತ್ತು ನನ್ನ ತಂಗಿ ನಮ್ಮ ತಾಯಿಯ ಒಡವೆಗಳನ್ನು ಹಂಚಿಕೊಳ್ಳುವ ಬಗ್ಗೆ ಮಾತನಾಡುತ್ತಿದ್ದಾಗ, ನನ್ನ

ಗಂಡ ಈ ದಿನ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ನನ್ನ ತಂಗಿಯ ತಲೆಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 03.10.2020 ರಂದು ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ** : ಏನೂ ಇಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**